**<u>ಹೆಚ್ಚುವರಿ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ</u>**

**ಸಿ.ಸಿ. ನಂ. 85/2020.**

| | | | |
|---|---|---|---|
| **ಹೆಸರು** | : | **ರೇವಣಸಿದ್ದಪ್ಪ** | **ದೋ.ಸಾ. 1** |
| **ತಂದೆಯ ಹೆಸರು** | : | **ಗುಂಡಪ್ಪ** | **ಪ್ರಾ.ಸಾ. 1** |
| **ವಯಸ್ಸು** | : | **60 ವರ್ಷ** | **ದಿನಾಂಕ: 27-01-2023** |
| **ಉದ್ಯೋಗ** | : | **ಕೂಲಿ ಕೆಲಸ** | |
| **ವಾಸಸ್ಥಳ** | : | **ಪಂಗರಗಾ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆ: ಸಹಾಯಕ ಸರಕಾರಿ ಅಭಿಯೋಜಕರಿಂದ:-</u>**

ಚಾಸಾ-2 ಮತ್ತು 3 ರವರು ನನಗೆ ಗೊತ್ತು. ಚಾಸಾ-4 ನನ್ನ ಹೆಂಡತಿ. ಚಾಸಾ-5 ನಮ್ಮ ಊರಿನವರು. 1 ರಿಂದ 3 ನೇ ಆರೋಪಿತರು ನನ್ನ ಅಣ್ಣನ ಮಕ್ಕಳು ಮತ್ತು 4 ನೇ ಆರೋಪಿ ನನ್ನ ಅತ್ತಿಗೆ. ಸುಮಾರು 4 ವರ್ಷಗಳ ಹಿಂದೆ ನನ್ನ ಅಣ್ಣ ಮೃತಪಟ್ಟಿದ್ದು ಗೊತ್ತಾದ ಮೇಲೆ ಸಾಯಂಕಾಲ ನಾನು ಮತ್ತು ನನ್ನ ಹೆಂಡತಿ ಚಾಸಾ-4 ರವರು ನನ್ನ ಅಣ್ಣನ ಮನೆಗೆ ಹೋದಾಗ ಇದ್ದಾಗ ಬರಲಿಲ್ಲ ಸತ್ತ ಮೇಲೆ ಬರತಿರಾ ಎಂದು ಹೇಳಿ 2 ನೇ ಆರೋಪಿ ನನಗೆ ಬೆನ್ನಿಗೆ ಮತ್ತು ಹೊಟ್ಟೆಗೆ ಹೊಡೆದನು. 1 ಮತ್ತು 3 ನೇ ಆರೋಪಿಗಳು ನನಗೆ ಕೈಯಿಂದ ಹೊಡೆದರು ಮತ್ತು 4 ನೇ ಆರೋಪಿ ಚಾಸಾ-4 ರವರಿಗೆ ಕೈಯಿಂದ ಹೊಡೆದಿದ್ದರು. ನಾಲ್ಕು ದಿನ ಆದ ಮೇಲೆ ಕಲಬುರಗಿ ಆಸ್ಪತ್ರೆಗೆ ಹೋಗಿ ದಾಖಲಾಗಿದ್ದೆ. ಆಸ್ಪತ್ರೆಯಲ್ಲಿ ಪೊಲೀಸರಿಗೆ ಘಟನೆಯ ಬಗ್ಗೆ ತಿಳಿಸಿದ್ದೇನೆ. ಪೊಲೀಸರು ನನ್ನ ಬರೆದಿರುವ ಹೇಳಿಕೆಯನ್ನು ಓದಿ ಹೇಳಿದರು. ಘಟನೆ ನಡೆದ 2-3 ದಿನಗಳಾದ ಮೇಲೆ ಪೊಲೀಸರು ಬಂದು ಪಂಚನಾಮೆ ಮಾಡಿದರು. ನ್ಯಾಯಾಲಯದ ಮುಂದೆ ಇರುವ 2 ನೇ ಆರೋಪಿತನನ್ನು ಸಾಕ್ಷಿ ಗುರುತಿಸಿರುತ್ತಾರೆ. ಸಾಕ್ಷಿಗೆ ಒಂದು ದಾಖಲೆ ತೋರಿಸಲಾಯಿತು ಸಾಕ್ಷಿ ನಾನೇ ನೀಡಿದ್ದು ಎಂದು ನುಡಿದಿದ್ದ ಕಾರಣ ಆದಾಖಲೆಯು ದೂರು ಆಗಿದ್ದು ಅದನ್ನು ನಿಪಿ-1 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ತನಿಖಾಧಿಕಾರಿಯವರ ಮುಂದೆ ಕೊಟ್ಟಿರುವ ದೂರಿಗೆ ಈ ಸಾಕ್ಷಿ ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿಯುತ್ತಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೊಡುವಂತೆ ಸ.ಸ.ಅ.ರವರು ಅನುಮತಿ ಕೋರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

**<u>ಪಾಟೀ ಸವಾಲು: ಸಹಾಯಕ ಸರಕಾರಿ ಅಭಿಯೋಜಕರಿಂದ:</u>**

ದಿನಾಂಕಃ 10-06-2019 ರಂದು ಸಾಯಂಕಾಲ 6.00 ಗಂಟೆ ಸುಮಾರಿಗೆ ನನ್ನ ಅಣ್ಣ ಮೃತಪಟ್ಟಿದ್ದ ಎಂದರೆ ಸರಿ. ಆರೋಪಿತರು ನನಗೆ ಎ ಭೊಸಡಿ ಮಗನೆ ನಿಮ್ಮ ಅಣ್ಣ ಜೀವಂತ ಇದ್ದಾಗ ಬಂದಿಲ್ಲ ಈಗ ಪಾಲು ಕೇಳಲು ಬಂದಿದ್ದಿ ಎಂದು ಅವಾಚ್ಯ ಶಬ್ದದಲ್ಲಿ ಬೈದಿದ್ದರು ಎಂದರೆ ಸರಿ. ನಂತರ ನನಗೆ ಆರೋಪಿಗಳು ತಡೆದು ನಿಲ್ಲಿಸಿದರು ಎಂದರೆ ಸರಿ. ನನ್ನ ಹೆಂಡತಿಯಾದ ಚಾಸಾ-4 ರವರಿಗೆ 4 ನೇ ಆರೋಪಿ ಕಾಲಿನಿಂದ ಒದ್ದಿದ್ದರು ಎಂದರೆ ಸರಿ. ನಂತರ ಚಾಸಾ-5 ರವರು ಬಂದು ಜಗಳ ಬಿಡಿಸಿದರು ಎಂದರೆ ಸರಿ. ನಂತರ 1 ರಿಂದ 4 ನೇ ಆರೋಪಿತರು ನಮ್ಮನ್ನು ಜೀವ ಸಹಿತ ಬಿಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿದ್ದರು ಎಂದರೆ ಸರಿ. ನಂತರ 7 ದಿನ ಆದ ಮೇಲೆ ದಿನಾಂಕಃ 17-06-2019 ರಂದು ಮಧ್ಯಾಹ್ನ 12.30 ಗಂಟೆಗೆ ಸರಕಾರಿ ಆಸ್ಪತ್ರೆ ಕಲಬುರಗಿಯಲ್ಲಿ ಪೊಲೀಸರಿಗೆ ಮೌಖಿಕ ದೂರನ್ನು ನೀಡಿದ್ದೇನೆ ಎಂದರೆ ಸರಿ. ಸಾಕ್ಷಿಯು ಮುಂದುವರೆದ ನಾನು ಚಿಕಿತ್ಸೆ ಪಡೆಯುತ್ತಿರುವ ಕಾರಣದಿಂದ 7 ದಿನ ತಡವಾಗಿ ದೂರನ್ನು ನೀಡಿದ್ದೇನ ಎಂದು ನುಡಿಯುತ್ತಾರೆ.

**ಆರೋಪಿ ಪರ ಶ್ರೀ RLH ವಕೀಲರು ಸಮಯವಕಾಶ ಕೋರಿದ್ದ ರಿಂದ ಮುಂದೂಡಲಾಯಿತು.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಹೆಚ್ಚುವರಿ ಪ್ರ.ದ.ನ್ಯಾ.ದಂ. ಚಿಂಚೋಳಿ**